# ಬೆಲೆ ಬಾಳುವ ಡೈವೋರ್ಸ್



ಕೆಲವು ಸೆಲೆಬ್ರಿಟಿಗಳ ಮದುವೆಯದ್ದೇ ದೊಡ್ಡ ಸುದ್ದಿ. ಆದರೆ ಅಮೆಜಾನ್ ಕಂಪೆನಿಯ ಧಣಿ ಜೆಫ್ ಬಿಜೋಸ್‌ನ ವಿವಾಹ ವಿಚ್ಛೇದನ ಈಗ ಅದಕ್ಕಿಂತ ದೊಡ್ಡ ಸುದ್ದಿ. ಕಳೆದ 25 ವರ್ಷಗಳಿಂದ ಪತ್ನಿ ಮೆಕೆಂಜೀ ಜೊತೆಗೆ ಸುಖಸಂಸಾರ ನಡೆಸಿದ ಜೆಫ್ ಬಿಜೋಸ್, ಈಗ ಪತ್ನಿಯಿಂದ ದೂರವಾಗಿದ್ದಾನೆ. ಪರಸ್ಪರ ಒಪ್ಪಿಗೆಯಿಂದ ಇಬ್ಬರೂ ಡೈವೋರ್ಸ್ ಮಾಡಿಕೊಳ್ಳುತ್ತಿರುವುದಾಗಿ ಹೇಳಿಕೆ ಹೊರಬಿದ್ದಿದೆ. 'ಭೂಗ್ರಹದ ಅತಿದೊಡ್ಡ ಶ್ರೀಮಂತ' ಎಂದು ಹೆಸರು ಪಡೆದಿರುವ ಅಮೆಜಾನ್ ಕಂಪೆನಿಯ ಚೇರ್‌ಮನ್ ಬಿಜೋಸ್, ಹೀಗೆ ಅಚಾನಕ್ಕಾಗಿ ವಿಚ್ಛೇದನ ನೀಡಲು ಕಾರಣಗಳೇನು ಎನ್ನುವುದೀಗ ಜಾಲತಾಣಗಳಲ್ಲಿ ಚರ್ಚೆಯಾಗುತ್ತಿರುವ ವಿಷಯ. ಅದಕ್ಕಿಂತ ಮುಖ್ಯವಾಗಿ ವಿಚ್ಛೇದನದ ಬಳಿಕ ಭಾರೀ ಮೊತ್ತದ ಪರಿಹಾರವನ್ನು ಪಡೆಯಲಿರುವ ಆತನ ಪತ್ನಿ ಮೆಕೆಂಜೀ, ಗಂಡನನ್ನು ಹಿಂದಿಕ್ಕಿ ಜಗತ್ತಿನ ಅತಿದೊಡ್ಡ ಶ್ರೀಮಂತೆ ಆಗಬಹುದೆ ಎನ್ನುವ ಕುತೂಹಲ ಜನರದ್ದು.

ಬಿಜೋಸ್‌ಗೀಗ 55ರ ಹರೆಯ. ಹೆಂಡತಿಗೆ ಆತ ಡೈವೋರ್ಸ್ ನೀಡಲಿದ್ದಾನೆ ಎನ್ನುವ ಸುದ್ದಿ ಕೆಲವು ವಾರಗಳಿಂದ ಹಬ್ಬಿತ್ತು. ಅದಕ್ಕೆ ಕಾರಣ ಲಾರೆನ್ ಸ್ಯಾಂಚೆಜ್ ಎಂಬ ಸುಂದರಿಯ ಜೊತೆಗೆ ಆತನಿಗಿದ್ದ ನಿಕಟ ಸ್ನೇಹ ಸಂಬಂಧ. 49ರ ಹರೆಯದ ಲಾರೆನ್ ಸ್ಯಾಂಚೆಜ್ ಟೀವಿಯೊಂದರ ಮಾಜಿ ಆ್ಯಂಕರ್, ಏರಿಯಲ್ ಫಿಲಂಸ್ ಕಂಪೆನಿಯ ಒಡತಿ ಮತ್ತು ಹೆಲಿಕಾಪ್ಟರ್ ಪೈಲಟ್. ಸಿನಿಮಾ ಉದ್ಯಮಿಯಾಗಿ 'ಹಾಲಿವುಡ್ ಮೊಘಲ್' ಎಂದೇ ಗುರುತಿಸಲ್ಪಡುವ ಪ್ಯಾಟ್ರಿಕ್ ವೈಟ್‌ಸೆಲ್‌ನ ಮಾಜಿ ಹೆಂಡತಿ. ಮೊದಲ ಪತ್ನಿಯ ವಿಚ್ಛೇದನದ ಬಳಿಕ ಬಿಜೋಸ್, ಲಾರೆನ್‌ಳನ್ನು ಮದುವೆಯಾಗುತ್ತಾನಂತೆ. 'ಲಾರೆನ್‌ನನ್ನು ಮದುವೆಯಾಗುವ ನಿರ್ಧಾರ ಬಿಜೋಸ್‌ನ ಮೂರ್ಖತನವನ್ನು ತೋರಿಸುತ್ತದೆ' ಎಂದಿದ್ದಾನೆ ಮಾಜಿ ಗಂಡ ಪ್ಯಾಟ್ರಿಕ್. ಆದರೆ 'ಪ್ರೇಮ ಕುರುಡು, ಅದಕ್ಕೆ ವಯಸ್ಸಿನ ಹಂಗಿಲ್ಲ' ಎನ್ನುವುದು ಮತ್ತೆ ನಿಜವಾಗಿದೆ.

ಉದ್ಯಮಿಯಾಗಿ ಬಿಜೋಸ್‌ನ ಪಯಣ ಉದ್ಯಮಲೋಕದ ಅತಿಮಧುರ ದಂತಕಥೆಯೇ. 1994ರಲ್ಲಿ ತನ್ನ ಮನೆಯ ಗ್ಯಾರೇಜ್‌ನಲ್ಲಿ ಪುಸ್ತಕಗಳನ್ನು ಮಾರುವ ಒಂದು ಆನ್‌ಲೈನ್ ಅಂಗಡಿಯನ್ನು ಆರಂಭಿಸಿದ ಆತನ ಉದ್ಯಮ ಸಾಮ್ರಾಜ್ಯದ ಆಳ, ಅಗಲವನ್ನು ಅಳೆಯುವುದು ಈಗ ಸುಲಭದ ಕೆಲಸವಲ್ಲ. ಶ್ರೀಮಂತರ ಸಂಪತ್ತಿನ ಲೆಕ್ಕ ಶೋಧಿಸುವ ಫೋರ್ಬ್ಸ್ ಪಟ್ಟಿಯ ಪ್ರಕಾರ, ಈತನ ಸದ್ಯದ ಸಂಪತ್ತು 13,830 ಕೋಟಿ ಅಮೆರಿಕನ್ ಡಾಲರ್! ಅಮೆಜಾನ್ ಕಂಪೆನಿಯಲ್ಲಿ ಈಗ ಶೇಕಡಾ 16ರಷ್ಟು ಷೇರು ಹೊಂದಿದ್ದಾನೆ. 2013ರಲ್ಲಿ 250 ದಶಲಕ್ಷ ಡಾಲರ್ ಕೊಟ್ಟು 'ವಾಷಿಂಗ್ಟನ್ ಪೋಸ್ಟ್' ಎಂಬ ಅಮೆರಿಕದ ಪ್ರತಿಷ್ಠಿತ ಮಾಧ್ಯಮ ಕಂಪೆನಿಯನ್ನು ಖರೀದಿಸಿದ್ದಾನೆ. ವೆಂಚರ್ ಕ್ಯಾಪಿಟಲಿಸ್ಟ್ ಆಗಿ ಈತನದ್ದು ಅತಿದೊಡ್ಡ ಹೆಸರು. ಟ್ವಿಟರ್, ವರ್ಕ್‌ಡೇ, ಬಿಸಿನೆಸ್ ಇನ್‌ಸೈಡರ್, ಸ್ಟಾಕ್ ಓವರ್‌ಫ್ಲೋ ಮುಂತಾದ ಕಂಪೆನಿಗಳ ಆರಂಭಕ್ಕೆ ಹಣ ಹೂಡಿದವ ಈತನೇ. 1998ರಲ್ಲಿ ಗೂಗಲ್‌ನಲ್ಲಿ 10 ಲಕ್ಷ ಡಾಲರ್ ಹೂಡಿದ್ದ. ಏರ್‌ಬಿಎನ್‌ಬಿ, ಉಬರ್ ಮುಂತಾಗಿ ಜಗತ್ತಿನ ದೈತ್ಯಕಂಪೆನಿಗಳಲ್ಲೆಲ್ಲಾ ಈತನ ಬಂಡವಾಳವಿದೆ. ಹಲವು ದೈತ್ಯ ಕಂಪೆನಿಗಳ ಜೊತೆಗೆ ಪಾರ್ಟ್‌ನರ್ ಕೂಡಾ ಆಗಿದ್ದು, ಅದರಲ್ಲಿ ವಾರೆನ್ ಬಫೆಟ್‌ನ ಬರ್ಕ್‌ಷೈರ್ ಹಾಥ್‌ವೇ ಕೂಡಾ ಸೇರಿದೆ. ಎಲ್ಲಕ್ಕಿಂತ ಮುಖ್ಯವಾಗಿ ಮರುಬಳಕೆಯ ರಾಕೆಟ್‌ಗಳ ಮೂಲಕ ಅಂತರಿಕ್ಷ ಯಾನದ ಯೋಜನೆ ಹಮ್ಮಿಕೊಂಡಿರುವ ಬ್ಲೂ ಒರಿಜಿನ್ ಕಂಪೆನಿಯ ಮಾಲೀಕನೀತ. ಈ ಕಂಪೆನಿಯು ವರ್ಷದ ಕೊನೆಗೆ ಅಂತರಿಕ್ಷಕ್ಕೆ ಸಾರ್ವಜನಿಕರನ್ನು ಕೊಂಡೊಯ್ಯುವ ಯೋಜನೆಯನ್ನು ಶುರು ಮಾಡಲಿದೆಯಂತೆ.

ಬಿಸೋಸ್ ಮತ್ತು ಪತ್ನಿ ಮೆಕೆಂಜೀ ವಾಸಿಸುತ್ತಿದ್ದುದು ವಾಷಿಂಗ್ಟನ್‌ನ ಭವ್ಯ ಬಂಗಲೆಯಲ್ಲಿ. ನಾಲ್ವರು ಮಕ್ಕಳು ಬೆಳೆದು ದೊಡ್ಡವರಾಗಿರುವುದರಿಂದ ಮಕ್ಕಳ ಪಾಲನೆಯ ಸಮಸ್ಯೆ ಇಲ್ಲ. ವಾಷಿಂಗ್ಟನ್‌ನಲ್ಲಿರುವ ಕುಟುಂಬ ಕಾನೂನಿನಂತೆ ಅಲ್ಲಿ ಡೈವೋರ್ಸ್ ಮಾಡುವ ಗಂಡ, ಪತ್ನಿಗೆ ತನ್ನ ಮದುವೆಯ ನಂತರದ ಆಸ್ತಿಯಲ್ಲಿ ಸಮಾನ ಪಾಲನ್ನು ಕೊಡಬೇಕು. ಅಮೆಜಾನ್ ಕಂಪೆನಿಯನ್ನು ಬಿಜೋಸ್ ಆರಂಭಿಸಿದ್ದು ಮೆಕೆಂಜೀಯನ್ನು ಮದುವೆಯಾದ ನಂತರ. ಈಗ ಇರುವ ಕುತೂಹಲವೆಂದರೆ, ಬಿಜೋಸ್ ತನ್ನ ಆಸ್ತಿಯಲ್ಲಿ ಅರ್ಧ ಪಾಲನ್ನು ಪತ್ನಿಗೆ ಕೊಡಲು ತಯಾರಿದ್ದಾನೆಯೇ ಎನ್ನುವುದು. ಈ ಹಿಂದೆ ಸಾಕಷ್ಟು ಸೆಲೆಬ್ರಿಟಿ ಉದ್ಯಮಿಗಳ ಡೈವೋರ್ಸ್‌ಗಳು ನಡೆದಾಗ ಆಸ್ತಿಗಾಗಿ ಬೀದಿರಂಪ ಮಾಡಿಕೊಂಡದ್ದುಂಟು. ಆದರೆ ಬಿಜೋಸ್ ಮತ್ತು ಮೆಕೆಂಜೀ ಬುದ್ಧಿವಂತ ಉದ್ಯಮಿಗಳಂತೆ ವರ್ತಿಸಿದ್ದಾರೆ. ಸ್ವಲ್ಪ ದೊಡ್ಡದೇ ಎನ್ನಬಹುದಾದ ಜಂಟಿ ಹೇಳಿಕೆಯೊಂದನ್ನು ಟ್ವಿಟರ್‌ನಲ್ಲಿ ಹರಿಬಿಟ್ಟಿದ್ದಾರೆ. 'ಈ 25 ವರ್ಷಗಳ ನಮ್ಮ ದಾಂಪತ್ಯದ ಪಯಣ ನಿಜಕ್ಕೂ ಸ್ಮರಣೀಯವಾದದ್ದು. ಜೀವನ ನಿಜಕ್ಕೂ ಸುಂದರವಾಗಿತ್ತು. 25 ವರ್ಷಗಳ ದಾಂಪತ್ಯ ಹೀಗೆ ಮುರಿಯಬಹುದು ಎನ್ನುವ ನಿರೀಕ್ಷೆ ಇರಲಿಲ್ಲ. ಇನ್ನು ಮುಂದೆಯೂ ನಾವು ಒಂದೇ ಕುಟುಂಬದಂತೆ, ಒಳ್ಳೆಯ ಸ್ನೇಹಿತರಾಗಿ ಇರುತ್ತೇವೆ' ಎಂದು ಆ ಜಂಟಿ ಹೇಳಿಕೆ ತಿಳಿಸಿದೆ. ಹೇಳಿಕೆಯ ಹೊರತಾಗಿಯೂ ಇಬ್ಬರ ಡೈವೋರ್ಸ್ ಪ್ರಕರಣ ಕೋರ್ಟಿನಲ್ಲಿ ಇತ್ಯರ್ಥವಾಗುವಾಗ ಇನ್ನೇನು ತಿರುವುಗಳನ್ನು ಪಡೆಯುತ್ತದೋ ಗೊತ್ತಿಲ್ಲ.

ಬಿಜೋಸ್‌ಗೆ ವಾಷಿಂಗ್ಟನ್ ಮಾತ್ರವಲ್ಲ, ಬೆವೆರ್ಲಿ ಹಿಲ್ಸ್, ಕ್ಯಾಲಿಫೋರ್ನಿಯಾ, ನ್ಯೂಯಾರ್ಕ್, ವ್ಯಾನ್‌ಹಾರ್ನ್, ಟೆಕ್ಸಾಸ್ ಮುಂತಾಗಿ ಅಮೆರಿಕದ ಇನ್ನೂ ಹಲವು ನಗರಗಳಲ್ಲಿ ಭವ್ಯ ಬಂಗಲೆಗಳಿವೆ. ಆ ವಿಳಾಸದ ಆಧಾರದಲ್ಲಿ ಅಲ್ಲಿ ಡೈವೋರ್ಸ್‌ಗೆ ಅರ್ಜಿ ಸಲ್ಲಿಸಿದರೆ ಆಸ್ತಿಯಲ್ಲಿ ಅರ್ಧ ಪಾಲು ಕೊಡುವ ಕಾನೂನು ಇಲ್ಲವಂತೆ. ಇಬ್ಬರ ವಕೀಲರ ಮಧ್ಯೆ ಈ ವಿಷಯಕ್ಕೇನಾದರೂ ಹಣಾಹಣಿ ನಡೆಯಬಹುದೆ ಎನ್ನುವ ಕೆಟ್ಟ ಕುತೂಹಲವೂ ಉದ್ಯಮ ವಲಯದಲ್ಲಿದೆ. ಅದೇನೇ ಇರಲಿ, ಈ ವರ್ಷದ ಅತಿದೊಡ್ಡ ಡೈವೋರ್ಸ್ ಸುದ್ದಿಯಿದು ಎನ್ನುವುದಂತೂ ನಿಶ್ಚಿತ.

■ ಹನಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65